

## ಚಪ್ಪಲಿ ಅಂಗಡೀಲಿ

ಶಿರಡಿಯಿಂದ ಧಾರವಾಡಕ್ಕೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆವು. ಬೆಂಗಳೂರಿಗೆ ಹೊರಟಿದ್ದ ದಂಪತಿಯ 3–4 ವರ್ಷದ ತುಂಟ ಮಗುವೊಂದು ಬಸ್ಸಿನ ತುಂಬೆಲ್ಲಾ ಓಡಾಡುತ್ತಾ ಎಲ್ಲರನ್ನೂ ಮುದ್ದಾಗಿ ಮಾತನಾಡಿಸುತ್ತಿತ್ತು. ಮುಂದಿನ ಸೀಟಿನಲ್ಲಿದ್ದ ಹಿರಿಯರೊಬ್ಬರು ಅದನ್ನು ಮಾತನಾಡಿಸಲು ಶುರುಮಾಡಿದರು.

'ಎಲ್ಲಿಗೆ ಹೋಗಿದ್ಯೋ ಪುಟ್ಟಾ?' ಎಂದು ಕೇಳಿದರು.

'ಶಿರಡಿಗೆ ಹೋಗಿದ್ವಿ, ಅಲ್ಲಿ ಇಷ್ಟು ದೊಡ್ಡ ಅಜ್ಜಾ ಕೂತ್ಕೊಂಡಿದ್ರು' ಅಂತಾ ಕೈಯನ್ನು ಮೇಲೆ, ಕೆಳಗೆ ಮಾಡಿ ಹೇಳುತ್ತಾ, ಅವ್ರಿಗೆ ನಮಸ್ಕಾರ ಮಾಡಿ ಬಂದೆ ಅಂತಾ ಹೇಳಿ ನನ್ನದು ಹೊಸಾ ಚಪ್ಪಲಿ ಅಂತಾ ಚಪ್ಪಲಿಯನ್ನು ತೋರಿಸಿದ.

'ಚಪ್ಪಲಿಯನ್ನು ಬೆಂಗಳೂರಿನಲ್ಲಿ ತೆಗೆದುಕೊಂಡದ್ದೋ ಅಥವಾ ಶಿರಡಿಯಲ್ಲಿ ತೆಗೆದುಕೊಂಡ್ಯೋ' ಅಂತಾ ಆ ಹಿರಿಯರು ಕೇಳಿದಾಗ ಆ ಮಗು 'ಚಪ್ಪಲಿ ಅಂಗಡಿಯಲ್ಲಿ ತೊಗೊಂಡ್ವಿ' ಎನ್ನುತ್ತಿದ್ದ ಹಾಗೇ ಅಕ್ಕಪಕ್ಕ ಕೇಳಿಸಿಕೊಂಡವರೆಲ್ಲಾ ಗೊಳ್ಳೆಂದು ನಕ್ಕರು.

**ನಳಿನಿ ಟಿ. ಭೀಮಪ್ಪ**

## ಟ್ಯಾಬ್ಲೆಟ್ ಬೇಡ

ನಮ್ಮ ಪಕ್ಕದ ಮನೆಯ ಶಿಕ್ಷಕರ ಪುಟ್ಟ ಮಗ ಬೇರೆಯವರ ಮನೆಯಲ್ಲಿ ಪುಟ್ಟ ಟ್ಯಾಬ್ಲೆಟ್ ನೋಡಿ ಬಂದಿದ್ದ. ಅದರಲ್ಲಿರುವ ಗೇಮ್‌ಗಳನ್ನು ಆಡಿದ ಮೇಲೆ ತನಗೂ ಅಂಥದೇ ಬೇಕೆಂದು ಕೊಡಿಸಲು ಅಪ್ಪನಲ್ಲಿ ಹಟ ಹಿಡಿದು ಅಳುತ್ತ ಇದ್ದ. ಹಳ್ಳಿಯಿಂದ ಬಂದಿದ್ದ ಅವನ ಅಜ್ಜಿ, 'ಯಾಕಂತೆ ಅಷ್ಟು ಅಳ್ತಾ ಇದಾನೆ?' ಕೇಳಿತು. 'ಅವನಿಗೆ ಟ್ಯಾಬ್ಲೆಟ್ ಬೇಕಂತೆ. ಇಷ್ಟು ಚಿಕ್ಕವನಿಗ ಈಗಲೇ ಬೇಡ ಅಂದ್ರೆ ಅರ್ಥವಾಗೋದೇ ಇಲ್ಲ' ಎಂದರು ಅವನ ತಂದೆ.

ಅದನ್ನು ಕೇಳಿ ಅಜ್ಜಿ, 'ಹೌದು ಕಣೋ. ನೀನಿನ್ನೂ ಚಿಕ್ಕವ. ಈಗಲೇ ಟ್ಯಾಬ್ಲೆಟ್ ಗೀಬ್ಲೆಟ್ ತಗೊಳ್ಳೋದು ಶರೀರಕ್ಕೆ ಅಷ್ಟು ಚೆನ್ನಾಗಿರೋಲ್ಲ. ಅಂತೂ ಬೇಕಿದ್ರೆ ಆಯುರ್ವೇದ ಪಂಡಿತರ ಹತ್ರ ಹೋಗಿ ಚಿಕ್ಕ ಮಾತ್ರೆ ಏನಾದರೂ ತಿಂದುಬಿಡು' ಎಂದು ಮೊಮ್ಮಗನಿಗೆ ಬುದ್ಧಿ ಹೇಳಿತು.



**ಪ. ರಾಮಕೃಷ್ಣ ಶಾಸ್ತ್ರಿ**

ಚಿತ್ರಗಳು: ಗಣೇಶ ಆಚಾರ್ಯ